7828

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s Siemens Gamesa Renewable Power Private Limited ಕಂಪನಿಯವರಿಗೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ, ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 90 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 117.6 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಇಎನ್ 365 ಎನ್‌ಸಿಇ 2016, ದಿನಾಂಕ:18.01.2018
2. ಸರ್ಕಾರದ ಆದೇಶ ಸಂಖ್ಯೆ:ಇಎನ್ 100 ಎನ್‌ಸಿಇ 2018, ದಿನಾಂಕ:20.03.2018
3. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರ ಪತ್ರ ಸಂಖ್ಯೆ:KREDL/08/OKPPL-117.6 MW (SGRPPL-90MW)/Jagalur/F-15(2021)/1333, ದಿನಾಂಕ: 26.03.2021

ಇಂಧನ ಇಲಾಖೆ ಬೆಂಗಳೂರು ಸಂ 807 ದಿನಾಂಕ 23/4/21

26/4/21

## ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದನ್ವಯ M/s Gamesa Renewable Private Limited ರವರಿಗೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ, ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ನೆಲ್ಲಿಕಟ್ಟೆ, ದಿಬ್ಬದಹಟ್ಟಿ, ಬಿದರಕೆರೆ, ಗೊಲ್ಲರಹಟ್ಟಿ, ಅಜ್ಜಪ್ಪನಹಳ್ಳಿ, ಯಲಗೋಡು, ಗೊಲ್ಲರಹಳ್ಳಿ, ಬಸ್ತಿಹಳ್ಳಿ, ಹುಲ್ಲೇಹಾಲ್, ಅಡವಿಗೊಲ್ಲರಹಳ್ಳಿ, ಗುಟ್ಟಿದುರ್ಗ, ಕಲ್ಲೆರೆ, ಸಾಮಲಗಟ್ಟ, ಕಕ್‌ಬಾಲು, ಹೊಸಹಟ್ಟಿ, ಹರಲಕಟ್ಟೆ, ಹೆಗ್ಗದೆಹಾಳು, ರಾಮರಹಳ್ಳಿ, ರಂಗವ್ವನಹಳ್ಳಿ ಮತ್ತು ಕಸವನಹಳ್ಳಿ ಗ್ರಾಮಗಳಲ್ಲಿ 90 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ವಂತ ಬಳಕೆ ಮಾಡಿಕೊಳ್ಳಲು ಅಥವಾ ಮೂರನೇ ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದನ್ವಯ M/s Gamesa Renewable Private Limited ರವರಿಗೆ ಹಂಚಿಕೆಯಾಗಿದ್ದ 90 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹೆಸರನ್ನು M/s Siemens Gamesa Renewable Power Private Limited ಎಂದು ಬದಲಾಯಿಸಿ ಆದೇಶಿಸಲಾಗಿತ್ತು.

ATO-W

C/6

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮೇಲಿನ ಆದೇಶದನ್ವಯ M/s Siemens Gamesa Renewable Power Private Limited ಕಂಪನಿಗೆ ಹಂಚಿಕೆಯಾಗಿರುವ 90 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ವರ್ಗಾವಣೆ ಮಾಡಿ, ಸದರಿ ಸಾಮರ್ಥ್ಯವನ್ನು 117.6 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ M/s Ostro Kannada Power Private Limited ಇವರು ಕೆ.ಆರ್.ಇ.ಡಿ.ಎಲ್.ನ್ನು ಕೋರಿರುವುದಾಗಿ, ಸದರಿ ವರ್ಗಾವಣೆಗೆ ಎರಡು ಕಂಪನಿಯವರು ಸಹಮತಿ ನೀಡಿರುವುದಾಗಿ ಹಾಗೂ ಸದರಿ ವರ್ಗಾವಣೆಗೆ ಅನ್ವಯವಾಗುವ ವರ್ಗಾವಣೆ ಶುಲ್ಕ, ಸಾಮರ್ಥ್ಯ ಹೆಚ್ಚಳ ಶುಲ್ಕ ಮತ್ತು ಡಿಪಿಆರ್ ಶುಲ್ಕವನ್ನು ಪಾವತಿಸಿರುವುದಾಗಿ ಮತ್ತು 90 ಮೆ.ವ್ಯಾ ಸಾಮರ್ಥ್ಯವನ್ನು 117.6 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಸಂಬಂಧ ಡಿಪಿಆರ್ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಸದರಿಯವರು ಯೋಜನೆಯನ್ನು ಅನುಷ್ಠಾನಗೊಳಿಸಲು ಅಕ್ಷಾಂಶ ಮತ್ತು ರೇಖಾಂಶ ಸ್ಥಳದಲ್ಲಿ 56 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು (2100 ಕಿ.ವ್ಯಾ. ಸಾಮರ್ಥ್ಯದ ಟರ್ಬೈನ್‌ಗಳು) ಅಳವಡಿಸಲು ಪ್ರತಿ ಟರ್ಬೈನ್‌ನ footprint ಜಾಗಕ್ಕೆ 4 ಎಕರೆಯಂತೆ ಒಟ್ಟು 224 ಎಕರೆ ಜಮೀನನ್ನು ಉಪಯೋಗಿಸಿಕೊಳ್ಳುವುದಾಗಿ ತಿಳಿಸುತ್ತಾ, ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತಿಗೆ ಸಂಬಂಧಿಸಿದಂತೆ ಮೂಲ ಆದೇಶದಲ್ಲಿ ನಮೂದಿಸಿರುವ ಸ್ವಂತ ಬಳಕೆ / ಮೂರನೇ

Wind Section
Inward No. 1812
Date 2/6/21
Sig

ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡುವ ಬದಲಾಗಿ, ಕೇಂದ್ರ ಸರ್ಕಾರದ Power Grid Corporation Of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ವರ್ಗದ ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಹಾಗೂ M/s Siemens Gamesa Renewable Power Private Limited ಕಂಪನಿಗೆ ಹಂಚಿಕೆಯಾಗಿರುವ 90 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ವರ್ಗಾವಣೆ ಮಾಡಿ, ಸದರಿ ಸಾಮರ್ಥ್ಯವನ್ನು 117.6 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತು ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ :ಎನರ್ಜಿ 105 ಎನ್ ಸಿಇ 2021**

**ಬೆಂಗಳೂರು ದಿನಾಂಕ:19.04.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Siemens Gamesa Renewable Power Private Limited ಇವರಿಗೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ, ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ನೆಲ್ಲಿಕಟ್ಟೆ, ದಿಬ್ಬದಹಟ್ಟಿ, ಬಿದರಕೆರೆ, ಗೊಲ್ಲರಹಟ್ಟಿ, ಅಜ್ಜಪ್ಪನಹಳ್ಳಿ, ಯಲಗೋಡು, ಗೊಲ್ಲರಹಳ್ಳಿ, ಬಸ್ತಿಹಳ್ಳಿ, ಹುಲ್ಲೇಹಾಲ್, ಅಡವಿಗೊಲ್ಲರಹಳ್ಳಿ, ಗುಟ್ಟಿದುರ್ಗ, ಕಲ್ಗೆರೆ, ಸಾಮಲಗಟ್ಟ, ಕಕ್‌ಬಾಲು, ಹೊಸಹಟ್ಟಿ, ಹರಲಕಟ್ಟೆ, ಹೆಗ್ಗದೆಹಾಳು, ರಾಮರಹಳ್ಳಿ, ರಂಗವ್ವನಹಳ್ಳಿ ಮತ್ತು ಕಸವನಹಳ್ಳಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 90 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ಈ ಕೆಳಕಂಡ ಷೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 117.6 ಮೆ.ವ್ಯಾಗೆ ಹೆಚ್ಚಿಸಿ ಆದೇಶಿಸಿದೆ.

**Geographical area description for 117.6 MW Capacity Wind Power Project of M/s Ostro Kannada Power Private Limited**

| Sl. No | Geographical area description of the project | Near by villages of the proposed area & District | Existing (Transfer) capacity in MW | Capacity on enhancement in MW | Total capacity in MW |
|---|---|---|---|---|---|
| 1 | The Proposed area is consists of two parts i.e. Part-A & Part-B, which is fully covered by private land. Potential area is of high plains with an average elevation of about 700m. It is spread in North-South direction. Further, it is surrounded by Bidarekere, Hullehal, Nellikatte and Ajjappanahalli Villages. And it is a non forest area.<br>**Part-A:**<br>The Area surrounded by points A,B,C,D and are held in the following Geographical co-ordinates as: | Nellikatte, Dibbadahatti, Bidarekere, Gollarahatti, Ajjappanahalli, Yalagodu, Gollarahalli, Bastihalli, Hullehal, Adavigollarahalli, Guttidurga, Kalgere, Kokbalu, Hosahatti, Haralakatte, Heggadehalu, Ramarahalli, Rangavvanahalli and Kasavanhalli Villages of Holalkere & Jagalur | 90 MW | 27.6 MW | 11[illegible] MW (56 Nos x 2100 kW) |